5417(6028) ಶ್ರೀ ರಾಜೇಂದ್ರನ್ ಎಸ್. (ಕೆ.ಜಿ.ಎಫ್) : ಮಾನ್ಯ ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸಂಪೂರ್ಣವಾಗಿ ಲಾಟರಿ ನಿಷೇಧ ಮಾಡಲಾಗಿದೆಯೇ?

ಆ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಬಸವರಾಜ ಎಸ್. ಹೊರಟಿ (ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) :

ಅ) ರಾಜ್ಯದಲ್ಲಿ ಲಾಟರಿಯನ್ನು ಸಂಪೂರ್ಣವಾಗಿ ನಿಷೇಧಿಸಿರುವುದಿಲ್ಲ. ದಿನಾಂಕ: 24.07.2004ರಿಂದ ರಾಜ್ಯದಲ್ಲಿ ಎಲ್ಲಾ ಆನ್‌ಲೈನ್ ಹಾಗೂ ಇಂಟರ್‌ನೆಟ್ ಲಾಟರಿಗಳನ್ನು ಮಾತ್ರ ನಿಷೇಧಿಸಿಲಾಗಿದೆ.

ಆ) ಸಾಂಪ್ರದಾಯಿಕ ಪೇಪರ್ ಲಾಟರಿಯ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಒಂದು ರೀತಿಯಾಗಿರುತ್ತದೆ.

5419(6068) ಶ್ರೀ ರಾಜೇಂದ್ರನ್ ಎಸ್. (ಕೆ.ಜಿ.ಎಫ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

a) Whether the government is aware that there is no Rural Police Station in the Bangarpet Constituency?

b) If so, whether the government has given permission to open the Rural Police Station to the Bangarpet Constituency?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು) :

ಅ) ಹೌದು

ಬಂಗಾರಪೇಟೆ (ಬೇತಮಂಗಲ) ವಿಧಾನಸಭಾ ಕ್ಷೇತ್ರದಲ್ಲಿ ಗ್ರಾಮೀಣ ಪೊಲೀಸ್ ಠಾಣೆ ಇರುವುದಿಲ್ಲ.

ಆ) ಬಂಗಾರಪೇಟೆ (ಬೇತಮಂಗಲ) ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಯಾವುದೇ ಗ್ರಾಮೀಣ ಪೋಲೀಸ್ ಠಾಣೆಯ ಸೃಜನೆಯ ಪ್ರಸ್ತಾವನೆಗಳು ಇಲಾಖೆಯ ಮುಂದೆ ಬಂದಿರುವುದಿಲ್ಲ.

5420(6070) ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೆ.ಜಿ.ಎಫ್‌ನಲ್ಲಿ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯ ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆಯೇ:

ಆ) ಆಗಿದ್ದಲ್ಲಿ ಹೆಚ್ಚುವರಿ ಸೆಷನ್ ನ್ಯಾಯಾಲಯವನ್ನು ಸ್ಥಾಪಿಸಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳುವುದು.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಕೆ.ಜಿ.ಎಫ್ ಜಿಲ್ಲಾ ಕೇಂದ್ರವಲ್ಲದ ಕಾರಣ ಅಲ್ಲಿ ಹೆಚ್ಚುವರಿ ಸತ್ರ ನ್ಯಾಯಾಲಯ ಸ್ಥಾಪಿಸಲು ಉಚ್ಚ ನ್ಯಾಯಾಲಯ ಒಪ್ಪಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

5421(6290) ಶ್ರೀ ರವೀಂದ್ರನಾಥ್ ಎಸ್.ಎ. (ಮಾಯಕೊಂಡ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?